# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 267

ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 12.08.2025

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು : ಪ್ರಸ್ತುತ ಎಷ್ಟು ಹಾಪ್ ಕಾಮ್ಸ್ ಗಳು ವಹಿವಾಟು ನಡೆಸುತ್ತಿವೆ : ಎಷ್ಟು ಮಳಿಗೆಗಳನ್ನು ಬಂದ್ ಮಾಡಲಾಗಿದೆ : ಬಂದ್ ಆಗಿದ್ದಲ್ಲಿ ಆಗಲು ಕಾರಣಗಳೇನು? (ಜಿಲ್ಲಾವಾರು ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಒಟ್ಟು 557 ಹಾಪ್ ಕಾಮ್ಸ್ ಮಳಿಗೆಗಳಿದ್ದು, ಈ ಮಳಿಗೆಗಳ ಪೈಕಿ ಪ್ರಸ್ತುತ 416 ಮಳಿಗೆಗಳು ವಹಿವಾಟು ನಡೆಸುತ್ತಿವೆ. ಒಟ್ಟು 141 ಮಳಿಗೆಗಳನ್ನು ಬಂದ್ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br>ಕಾರಣಗಳು :<br>I. ಬೆಂಗಳೂರಿನ ಪ್ರತಿಷ್ಠಿತ ಮಾಲ್ ಗಳು ಹಾಗೂ ಖಾಸಗಿ ವ್ಯಾಪಾರಸ್ಥರಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುತ್ತದೆ. ಜೊತೆಗೆ, ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.<br>II. ಜನಸಂದಣಿ ಕಡಿಮೆ ಇರುವ ಕಾರಣ, ಕೆಲವು ಪ್ರದೇಶಗಳಲ್ಲಿ, ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವ ಸ್ಥಳಗಳಲ್ಲಿ ಮಳಿಗೆಗಳನ್ನು ಮುಚ್ಚಲಾಗಿದೆ.<br>III. ಖಾಸಗಿಯವರು ತಳ್ಳುವ ಗಾಡಿಗಳು ಹಾಗೂ ಬೀದಿ ಬದಿಯಲ್ಲಿ ಹೆಚ್ಚಿನ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ಹಾಪ್ ಕಾಮ್ಸ್ ಮಳಿಗೆಗಳ ವ್ಯಾಪಾರ ವಹಿವಾಟು ಕಡಿಮೆಯಾಗಿರುತ್ತದೆ.<br><br>There are 557 Hopcoms stalls in the state, out of which 416 stalls are functioning and 141 stalls are closed. District-wise details are provided in the Annexure.<br><br><u>Reasons :</u><br>I. Intense business competition from prestigious malls and private traders in Bengaluru. In some areas, stalls have been demolished due to road widening and metro construction. |

| | | |
|---|---|---|
| | | II. Some stalls are located in less populated areas hence due to less transaction stall are closed.<br>III. Private traders sell fruits and vegetables in mobile carts and on road side, this has reduced the sale proceeds of Hopcoms. |
| ಆ) | ಹಾಪ್ ಕಾಮ್ಸ್ ಮಳಿಗೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟ ಮಾಡಬೇಕೆಂಬ ನಿಯಮ ಇದೆಯೇ : ಕೆಲವೊಂದು ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು,<br>ಹಾಪ್ ಕಾಮ್ಸ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ<br>ಬಂದಿದೆಯೇ : | ಹೌದು ನಿಯಮ ಇದೆ.<br><br>ಹಾಪ್ ಕಾಮ್ಸ್ ಸಂಸ್ಥೆಯ ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದಿಲ್ಲ. ಸಂಸ್ಥೆಯ ಬಹುತೇಕ ಮಳಿಗೆಗಳನ್ನು ಸಂಸ್ಥೆಯ ನೌಕರರ ವತಿಯಿಂದಲೇ ನಿರ್ವಹಿಸಲಾಗುತ್ತಿದೆ. ಕೆಲವು ಮಳಿಗೆಗಳನ್ನು ಸಂಸ್ಥೆಯ ನಿಯಮಗಳಂತೆ ಫ್ರಾಂಚೈಸಿ ಆಧಾರದ ಮೇಲೆ ನೀಡಲಾಗಿರುತ್ತದೆ. ಸಂಸ್ಥೆಯ ಮಳಿಗೆಗಳಲ್ಲಿ ಆನ್ ಲೈನ್ ಬಿಲ್ಲಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು, ಸಂಸ್ಥೆಯು ನಿಗಧಿ ಪಡಿಸಿದ ದರಗಳನ್ನು ತೂಕದ ಮಾಪನ ಯಂತ್ರ (ಸ್ಕೇಲ್) ಗಳಿಗೆ ಪ್ರತಿದಿನ ಆರೋಹಣೆ (upload) ಮಾಡಲಾಗುವುದು. ಸದರಿ ಫ್ರಾಂಚೈಸಿದಾರರು ಸಹ ಸಂಸ್ಥೆಯು ಪ್ರತಿ ದಿನ ನಿಗಧಿಪಡಿಸಿದ ದರಗಳಲ್ಲಿಯೇ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಹೀಗಾಗಿ ಹಣ್ಣುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.<br><br>Yes, rules are there.<br>No private individuals sell fruits in Hopcoms stalls. Most of the stalls are managed by the employees of the Hopcoms. Some stalls are given on franchise. Online billing system is in place in the Hopcoms stalls and the prices are fixed on daily basis and uploaded to the weighing scales. Franchisees also sell fruits at the prices fixed by the Hopcoms every day. There is no scope for selling fruits at a higher price. |
| ಇ) | ಬೆಂಗಳೂರು ನಗರ ಭಾಗದ ಅನೇಕ ಕಡೆ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಅಕ್ಕಿ ಮೂಟೆ ಹಾಗೂ ಇನ್ನಿತರೆ ತೋಟಗಾರಿಕೆಯ ಬೆಳೆಗಳಲ್ಲದ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ .ಗಮನಕ್ಕೆ ಬಂದಿದೆಯೇ : ಹಾಪ್ ಕಾಮ್ಸ್ ಸಂಸ್ಥೆಯ ಮೂಲ ಉದ್ದೇಶವೇನು: | ಹೌದು. ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸುವ ದೃಷ್ಟಿಯಿಂದ ಸಂಸ್ಥೆಯ ಉಪವಿಧಿಗಳ ಅನ್ವಯ ಕೃಷಿ/ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.<br>• ಕರ್ನಾಟಕ ಆಯಿಲ್ ಫೆಡರೇಷನ್ ಸಂಸ್ಥೆಯು ಸರಬರಾಜು ನೀಡುವ ಅಕ್ಕಿಯನ್ನು ಸಂಸ್ಥೆಯ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ.<br>• ಹಾಪ್ ಕಾಮ್ಸ್ ಸಂಸ್ಥೆಯ ಮೂಲ ಉದ್ದೇಶವೆಂದರೆ, ಸದಸ್ಯ ರೈತರು ಬೆಳೆದ ಹಣ್ಣು |

| | | |
|---|---|---|
| | | ಮತ್ತು ತರಕಾರಿಗಳನ್ನು ಯೋಗ್ಯ ಬೆಲೆಯಲ್ಲಿ ಖರೀದಿಸಿ ವ್ಯಾಪಾರ ಮಾಡುವುದು.<br><br>Yes. In the interest of profitability of Hopcoms, a provision has been made to sell other agricultural/food products as per byelaws.<br>• Rice supplied by Karnataka Oil Federation is being sold in the Hopcoms stalls.<br>• The basic objective of Hopcoms is to purchase and market fruits and vegetables grown by member farmers at a reasonable price |
| ಈ) | ಹಾಗಿದ್ದಲ್ಲಿ ಇದುವರೆಗೂ ಎಷ್ಟು ಮಳಿಗೆಗಳನ್ನು ಪರಿಶೀಲಿಸಲಾಗಿದೆ: ತೆಗೆದುಕೊಂಡ ಕ್ರಮವೇನು: ಇದರಿಂದ ರೈತರಿಗೆ ಅನಾನುಕೂಲವಾಗುವುದಿಲ್ಲವೇ : | ಅನ್ವಯಿಸುವುದಿಲ್ಲ<br>Not applicable |
| ಉ) | ಪ್ರಸ್ತುತ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಯೆಷ್ಟು? ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸಕಾರ್ಯಕ್ಕೆ ತೊಂದರೆಯಾಗುತ್ತಿಲ್ಲವೇ; | ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾದ 782 ಹುದ್ದೆಗಳಲ್ಲಿ, 438 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 344 ಹುದ್ದೆಗಳು ಖಾಲಿ ಇರುತ್ತವೆ.<br>ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸಕಾರ್ಯಕ್ಕೆ ತೊಂದರೆಯಾಗದಂತೆ ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.<br>Total sanctioned posts are 782 in that 438 staff are working in HOPCOMS in the state, and 344 posts are vacant.<br>Day to day activities are being carried out by employing staff on outsource basis, to avoid any disruption due to shortage of staff |
| ಊ) | ಹಾಪ್ ಕಾಮ್ಸ್ ಸಂಸ್ಥೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿರುವುದು ನಿಜವೇ; ಹಾಗಿದ್ದಲ್ಲಿ ಇದರಿಂದ ಹೊರಬರಲು ಇಲಾಖೆ ಯಾವ ಕ್ರಮ ತೆಗೆದುಕೊಂಡಿದೆ; | ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ಈ ಹಿಂದಿನ 4 ಸಾಲುಗಳ ಲೆಕ್ಕ ಪರಿಶೋಧನಾ ವರದಿಯ ಅನ್ವಯ ನಷ್ಟದಲ್ಲಿರುತ್ತದೆ. ಸಂಸ್ಥೆಯಲ್ಲಿ ನಿವೃತ್ತ ನೌಕರರ ಸಂಖ್ಯೆ ಹೆಚ್ಚಾಗಿದ್ದು, ಸದರಿ ನೌಕರರಿಗೆ ನೀಡಬೇಕಾದ ನಿವೃತ್ತಿ ನಂತರದ ಆರ್ಥಿಕ ಸೌಲಭ್ಯಗಳಿಗೆ ಅವಕಾಶ ಕಲ್ಪಿಸಿಕೊಂಡಿರುವುದರಿಂದ ನಷ್ಟಕ್ಕೆ ಕಾರಣವಾಗಿದೆ.<br><br>ಇದರಿಂದ ಹೊರಬರಲು ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ,<br>1. ಸರ್ಕಾರದಿಂದ ದುಡಿಯುವ ಬಂಡವಾಳವಾಗಿ ದೀರ್ಘಾವಧಿ ಸಾಲ ಪಡೆದಿದ್ದು, ಸಂಸ್ಥೆಯ ದೈನಂದಿನ ವಹಿವಾಟು ಹೆಚ್ಚಿಸಲು |

| | | |
|---|---|---|
| | | ಹೋಟೆಲ್, ಕಾರ್ಖಾನೆಗಳು, ಸಂಘ ಸಂಸ್ಥೆಗಳಿಗೆ ಸಗಟು ದರದಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗಿರುತ್ತದೆ.<br>2. ಮೊಬೈಲ್ ವಾಹನಗಳ ಮೂಲಕ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಕ್ರಮವಹಿಸಲಾಗಿರುತ್ತದೆ.<br>3. ಅಪಾರ್ಟ್‌ಮೆಂಟ್‌ಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಕ್ರಮ ವಹಿಸಲಾಗಿರುತ್ತದೆ.<br>4. ಪ್ರಸ್ತುತ 2024-25 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು ಪ್ರಗತಿಯಲ್ಲಿದ್ದು, ಲಾಭದ ನಿರೀಕ್ಷೆಯಲ್ಲಿದೆ.<br><br>Bangalore Hopcoms has incurred loss in the previous 4 years as per the audit report. This loss is due to the payment of post-retirement financial benefits to the increased number of retired employees during the period.<br>To come out of this following measures are taken:<br>1) Long term loan from the government for working capital has been received to increase the daily turnover of Hopcoms, steps are being taken to supply fruits and vegetables at wholesale prices to hotels, factories, organizations.<br>2) To sell fruits and vegetables through mobile vehicles.<br>3) Fruits and vegetables are sold at apartments across Bengaluru.<br>4. The current audit report for the year 2024-25 is in progress and it is expected to be profitable. |
| ಋ) | ಹಾಪ್ ಕಾಮ್ಸ್ ಸರ್ಕಾರದಿಂದ ಸಾಲ ಪಡೆದುಕೊಂಡಿದೆಯೇ; ಹಾಗಿದ್ದಲ್ಲಿ ಶೇಕಡ ಬಡ್ಡಿ ದರವೆಷ್ಟು; ಹಾಗೂ ಸಾಲ ಪಡೆಯುವ ಉದ್ದೇಶವೇನು; | ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ರೂ. 15.00 ಕೋಟಿಗಳನ್ನು ಸರ್ಕಾರದಿಂದ ಸಾಲ ಪಡೆದುಕೊಂಡಿದೆ. ಈ ಸಾಲಕ್ಕೆ ವಾರ್ಷಿಕ 10.25% ಬಡ್ಡಿ ದರ ವಿಧಿಸಲಾಗಿದೆ. ಈ ಸಾಲವನ್ನು ದುಡಿಯುವ ಬಂಡಾವಳದ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗಿದೆ.<br><br>Bangalore Hopcoms has taken a loan of Rs. 15 crores from the Government for working capital at an interest rate of 10.25 percent. |

HORTI 349 HGM 2025

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಅನುಬಂಧ – 1

ರಾಜ್ಯದಲ್ಲಿನ ಹಾಪ್ ಕಾಮ್ಸ್ ಮಳಿಗೆಗಳ ವಿವರಗಳು

| ಕ್ರ. ಸಂ. | ಜಿಲ್ಲಾ ಹಾಪ್ ಕಾಮ್ಸ್ | ಒಟ್ಟು ಮಳಿಗೆಗಳ ಸಂಖ್ಯೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ | ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು | 266 | 178 | 88 |
| 2 | ಬಾಗಲಕೋಟೆ | 03 | 01 | 2 |
| 3 | ಬೆಳಗಾವಿ | 11 | 08 | 3 |
| 4 | ಬೀದರ್ | 04 | 02 | 2 |
| 5 | ಬಳ್ಳಾರಿ | 03 | 01 | 2 |
| 6 | ಚಾಮರಾಜನಗರ | 08 | 08 | 0 |
| 7 | ಚಿತ್ರದುರ್ಗ | 20 | 17 | 3 |
| 8 | ಚಿಕ್ಕಮಗಳೂರು | 02 | 02 | 0 |
| 9 | ದಾವಣಗೆರೆ | 09 | 09 | 0 |
| 10 | ಧಾರವಾಡ | 10 | 08 | 2 |
| 11 | ಗದಗ | 06 | 06 | 0 |
| 12 | ಹಾವೇರಿ | 1 | 1 | 0 |
| 13 | ಹಾಸನ | 9 | 08 | 1 |
| 14 | ಕಲ್ಬುರ್ಗಿ | 11 | 10 | 1 |
| 15 | ಕೊಡಗು | 03 | 03 | 0 |
| 16 | ಕೊಪ್ಪಳ | 09 | 09 | 0 |
| 17 | ಮಂಡ್ಯ | 22 | 14 | 8 |
| 18 | ಮೈಸೂರು | 49 | 32 | 17 |
| 19 | ಮಂಗಳೂರು | 20 | 18 | 2 |
| 20 | ರಾಯಚೂರು | 05 | 05 | 0 |
| 21 | ಶಿವಮೊಗ್ಗ | 38 | 38 | 0 |
| 22 | ಶಿರಸಿ | 12 | 12 | 0 |
| 23 | ತುಮಕೂರು | 14 | 10 | 4 |
| 24 | ವಿಜಯಪುರ | 22 | 16 | 6 |
| | ಒಟ್ಟು | 557 | 416 | 141 |